ಅರಣ್ಯ ಕಾಯಿದೆ ೧೯೬೩ ರ ಸೆಕ್ಷನ್ ೫ರನ್ವಯ ದಿನಾಂಕ ೦೭-೦೨-೧೯೯೪ ರಲ್ಲಿ ಘೋಷಣೆಯನ್ನು ಹೊರಡಿಸಿರುತ್ತಾರೆ ದಿ. ೦೫.೦೧.೧೯೯೫ ರಲ್ಲಿ ನಡವಳಿಕೆ ನಡೆಸಿದ್ದು ನಂತರದಲ್ಲಿ ಇದರ ಮೇಲೆ ಕ್ರಮ ಕೈಗೊಳ್ಳುವಲ್ಲಿ ವಿಳಂಬ ಉಂಟಾಗಿರುತ್ತದೆ. ಈ ಬಗ್ಗೆ ಕ್ರಮ ಕೈಗೊಳ್ಳುವ ಕುರಿತು ಜಿಲ್ಲಾಧಿಕಾರಿಗಳು. ಚಾಮರಾಜನಗರ ಜಿಲ್ಲೆ ಇವರಿಗೆ ಸೂಕ್ತ ನಿರ್ದೇಶನ ನೀಡಿದ್ದು ಶೀಘ್ರ ಕ್ರಮ ಕೈಗೊಳ್ಳಲಾಗುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೧೩ (೨೪೦೪)

ಸದಸ್ಯರ ಹೆಸರು : ಶ್ರೀ ಎಸ್. ಬಾಲರಾಜ್ (ಕೊಳ್ಳೇಗಾಲ)

ಉತ್ತರಿಸುವವರು : ಶ್ರೀಜೆಸ್. ಶಿವಣ್ಣ (ರೇಷ್ಮೆ ಸಚಿವರು)

ಪ್ರಶ್ನೆ

ಅ) ರಾಜ್ಯ ಸರ್ಕಾರಿ ರೇಷ್ಮೆ ಸಂಸ್ಥೆಗಳು ಮತ್ತು ರೇಷ್ಮೆ ಕಾರ್ಖಾನೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರುಗಳಿಗೆ ವಿಶೇಷ ಸ್ವಯಂ ನಿವೃತಿ ಯೋಜನ ಜಾರಿಗೊಳಿಸುವುದು ಸರ್ಕಾರದ ಗಮನದಲ್ಲಿದೆಯೇ ;

ಆ) ಕೊಳ್ಳೇಗಾಲ ಸರ್ಕಾರಿ ರೇಷ್ಮೆ ಕಾರ್ಖಾನೆಯಲ್ಲಿನ ನೌಕರರು ಸ್ವಯಂ ನಿವೃತ್ತಿ ಪಡೆಯಲು ಅಶಕ್ತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಅನಾರೋಗ್ಯ ಪೀಡಿತರಿಗೆ ಹಾಗೂ ಅಶಕ್ತ ಕಾರ್ಮಿಕರಿಗಾದರೂ ವಿಶೇಷ ಸ್ವಯಂ ನಿವೃತ್ತಿ ಸೌಲಭ್ಯವನ್ನು ನೀಡುವುದಕ್ಕೆ ಸರ್ಕಾರಕ್ಕೆ ಇರುವ ತೊಂದರೆಗಳೇನು ;

ಉತ್ತರ

ಅ) ಇಲ್ಲ.

ಆ) ಬಂದಿದೆ.

ಇ) ರಾಜ್ಯ ಸರ್ಕಾರಿ ನೌಕರರಿಗೆ ಘೋಷಿಸಿದ್ದ ವಿಶೇಷ ಸ್ವಯಂ ನಿವೃತ್ತಿ ಯೋಜನೆಯು ಕಾರ್ಖಾನೆಗಳ ನೌಕರರುಗಳಿಗೆ ಅನ್ವಯವಾಗುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೪೧೫ (೧೪೭೦)

ಸದಸ್ಯರ ಹೆಸರು : ಶ್ರೀ ದೇಶಪಾಂಡೆ ಆರ್. ವಿ (ಹಲಿಯಾಳ್)

ಉತ್ತರಿಸುವವರು : ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಪ್ರಶ್ನೆ

ಅ) ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯ ಜನರ ಬೇಡಿಕೆಯಂತೆ ಬಂಡೇಲಿಯನ್ನು ತಾಲ್ಲೂಕು ಕೇಂದ್ರವಾಗಿ ಪರಿಗಣಿಸುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಇದರ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದು ನಿಜವೇ ;

ಇ) ಈ ಪ್ರಸ್ತಾವನೆಯನ್ನು ಅನುಷ್ಠಾನಗೊಳಿಸಲು ತೆಗೆದುಕೊಳ್ಳಲಾದ ಕ್ರಮಗಳೇನು ;

ಉತ್ತರ

ಅ) ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವಂತೆ ಮನವಿಗಳು ಸರ್ಕಾರಕ್ಕೆ ಬಂದಿರುತ್ತವೆ.